ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,
ಸೆಕ್ಟರ್ ನಂ-63,ಪ್ಲಾಟ್ ನಂ:110,ನವನಗರ,ಬಾಗಲಕೋಟೆ-03
Tel:08354-297330

HUBLI ELECTRICITY SUPPLY COMPANY LIMITED

(Wholly owned Govt. of Karnataka undertaking)
Superintending Engineer (Ele.)
O&M Circle, HESCOM, Sector No-63,Plot No:110, Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ:ಬಿಜಿಕೆ/ಅಅ(ವಿ)/ಅಲೆನಿ/ಸಲೆ/ಹಿಸ-1/23-24/ ದಿನಾಂಕ:

ದಿನಾಂಕ:24.05.2023 ರಂದು ಮಧ್ಯಾಹ್ನ 12.00 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

**ವಿಷಯ: "ಶಾಶ್ವತ ವಿದ್ಯುತ್ ಸೌಲಭ್ಯ ಒದಗಿಸುವ" ಕುರಿತು.**

<u>ಪ್ರಕರಣ ಸಂಖ್ಯೆ:07/2022</u>

ಶ್ರೀ. ಗಂಗಾಧರ ಮಹಾಂತಪ್ಪ ಅಂಗಡಿ
ಪ್ರತಿನಿಧಿ: } -------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಹುವಿಸಕಂನಿ., ಇಲಕಲ್ಲ } -------- ಪ್ರತಿವಾದಿ

ಹಾಜರಿದ್ದವರು: 1) ಶ್ರೀ. ಸಿ ವ್ಹಿ ಶಿವಪೂಜಿ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟೆ.

2) ಶ್ರೀ. ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.

3) ಶ್ರೀ. ಜಿ. ಎಸ್. ಅವಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲ ರವರು ಗೈರು ಹಾಜರಾಗಿರುತ್ತಾರೆ.

4) ಶ್ರೀ. ಗಂಗಾಧರ ಮಹಾಂತಪ್ಪ ಅಂಗಡಿ, ಹನುಮಸಾಗರ ರಸ್ತೆ ಉಸ್ಮಾನ ಗಣಿ ಪ್ಲಾಟ್ ಇಲಕಲ್ಲ ಜಿ॥ಬಾಗಲಕೋಟೆ.

*&*&*

ಪ್ರಕರಣ ಸಂಖ್ಯೆ:07/2022 ರಕ್ಕೆ ಸಂಬಂಧಿಸಿದಂತೆ, ದಿನಾಂಕ:24-05-2023 ರಂದು ಮಧ್ಯಾಹ್ನ 12.00 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಪೀಠಿಕೆ:

1. ಗ್ರಾಹಕರು ತಮ್ಮ ಮನೆಗೆ ವಿದ್ಯುತ್ ಸಂಪರ್ಕ ಹೊಂದಿದ್ದು, ನನ್ನ ಪತ್ನಿಯ ಹೆಸರಿನಲ್ಲಿ ಇದ್ದ 160/ಕ/06 Temp-3473 ಸ್ಥಾವರ ಇದ್ದು, ನನ್ನ ಪತ್ನಿಯ ಹೆಸರಿನಲ್ಲಿ ಇದ್ದ ಮನೆಗೂ ಶಾಶ್ವತ ವಿದ್ಯುತ್ ಸಂಪರ್ಕ ನೀಡಲು ಹಿಂದಿನ ಸಭೆಯಲ್ಲಿ ವಿನಂತಿಸಿದ್ದರು.
2. ಶ್ರೀ. ಜಿ. ಎಸ್. ಅವಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಇಲಕಲ್ಲ ರವರ ದಿನಾಂಕ:24-05-2023 ರ ಸಭೆಗೆ ಹಾಜರಾಗಿರುತ್ತಾರೆ.

<u>ಶ್ರೀ. ಗಂಗಾಧರ ಮಹಾಂತಪ್ಪ ಅಂಗಡಿ, ಹನುಮಸಾಗರ ರಸ್ತೆ ಉಸ್ಮಾನ ಗಣಿ ಪ್ಲಾಟ್ ಇಲಕಲ್ಲ ರವರ ದಿನಾಂಕ:24-05-2023 ರ ಸಭೆಯಲ್ಲಿನ ಹೇಳಿಕೆ</u> :

ಸದರೀ ಗ್ರಾಹಕರು ನಾಲ್ಕು ಎಕರೆ ಲೇಔಟ್ ಇದ್ದು, ಸದರೀ ಲೇಔಟ ನಲ್ಲಿ 19 ಮನೆಗಳಿದ್ದು, ಅದರಲ್ಲಿ ಒಂದು ಮನೆಗೆ ಮಾತ್ರ ಶಾಶ್ವತ ವಿದ್ಯುತ್ ಸಂಪರ್ಕ ನೀಡಿರುತ್ತಾರೆ. ಅದರಂತೆ ನಮಗೂ ಕೂಡಾ ಶಾಶ್ವತ ವಿದ್ಯುತ್ ಸಂಪರ್ಕ ನೀಡಲು ವಿನಂತಿಸಿದರು. ಹಾಗೂ ಲೇಔಟನ ಶಾಶ್ವತ ವಿದ್ಯುತ್ ಸಂಪರ್ಕ ನೀಡಲು ಬರುವಂತಹ ಖರ್ಚನ್ನು ಲೇಔಟನಲ್ಲಿರುವ 19 ಮನೆಗಳ ಮಾಲೀಕರ ಜೊತೆ ಚರ್ಚಿಸಿ ಭರಣಾ ಮಾಡಲು ಒಪ್ಪಿಸುತ್ತೇನೆಂದು ಹೇಳಿದರು.

<u>ಶ್ರೀ. ಜಿ. ಎಸ್. ಅವಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಇಲಕಲ್ಲ ರವರ ದಿನಾಂಕ:24-05-2023 ರ ಸಭೆಯಲ್ಲಿನ ಹೇಳಿಕೆ :</u>

ಸದರೀ ಲೇಔಟನಲ್ಲಿ 19 ಮನೆಗಳಿದ್ದು, ಅದರಲ್ಲಿ ಒಂದು ಮನೆಗೆ ಮಾತ್ರ ಶಾಶ್ವತ ವಿದ್ಯುತ್ ಸಂಪರ್ಕ 2019 ರಲ್ಲಿ ನೀಡಲಾಗಿತ್ತು. ಆದರೆ ಸದರೀ ಶಾಶ್ವತ ವಿದ್ಯುತ್ ಸಂಪರ್ಕ ಪಡೆದ ಗ್ರಾಹಕರ ಒಪ್ಪಿಗೆ ಮೇರೆಗೆ ಒಪ್ಪಿಗೆ ಪತ್ರ ಪಡೆದು ನಿಯಮಾನುಸಾರ ಮರಳಿ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ನೀಡಲಾಗಿದೆ. ಸದರೀ ಲೇಔಟ ಅಬಾಡಮೆಂಟ್(Abadment Layout) ಲೇಔಟ್ ಆಗಿರುವದರಿಂದ ಸದರೀ ಲೇಔಟಗೆ ಯಾವುದೇ ಅಭಿವೃದ್ಧಿ ಶುಲ್ಕ ಭರಣಾ ಮಾಡಿರುವದಿಲ್ಲ. ಸದರೀ ಲೇಔಟ ಒಟ್ಟು ನಾಲ್ಕು ಎಕರೆ ಇದ್ದು ಅದರಲ್ಲಿ 19 ಮನೆಗಳು ಇದ್ದು, ಸದರೀ ಲೇಔಟಿನ ಮಾಲೀಕರು ಯಾವುದೇ ರೀತಿಯ ಅಭಿವೃದ್ಧಿ ಶುಲ್ಕ ಭರಣಾ ಮಾಡಿರುವದಿಲ್ಲ ಆದ್ದರಿಂದ ಯಾವುದೇ ಮನೆಗಳಿಗೂ ಶಾಶ್ವತ ವಿದ್ಯುತ್ ಸಂಪರ್ಕ ನೀಡಿರುವದಿಲ್ಲವೆಂದು ತಿಳಿಸಿರುವರು.

<u>ಆ ದೇ ಶ</u>

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2022-23/ 2106-2110 ದಿನಾಂಕ: 16 JUN 2023

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಇಲಕಲ್ಲ ರವರಿಗೆ ಸದರೀ ಲೇಔಟ್ ಮಾಲೀಕರ ವಿದ್ಯುತ್ ಮೂಲ ಸೌಕರ್ಯ ಅಭಿವೃದ್ಧಿಪಡಿಸಿಕೊಳ್ಳಲು ಮುಂದೆ ಬರದೇ ಇರದ ಪಕ್ಷದಲ್ಲಿ ಸಂಖ್ಯೆ:ಸಿಎ 141 ಎಸ್.ಪಿ.ಕ್ಯೂ(E) 2022 ದಿನಾಂಕ:11-01-2022 ಅನುಸಾರ

3.2.5 In case of layouts/sites where the infrastructure of Electric line/ plant is not developed within such layouts/sites by the Developer, the distribution licensee shall arrange power supply to the applicants/consumers by recovering the expenditure from them towards electric line and plant as per Clause 3.2.3 (i), (ii), (iii), (iv) and 3.2.3 (v) NOTE 1 of KERC (Recovery of Expenditure for Supply of Electricity) Regulations, 2004, as amended from time to time.

ಅಬಾಡಮೆಂಟ್(Abadment Layout) ಲೇಔಟನ್ ಅಂದಾಜು ಪತ್ರಿಕೆ ತಯಾರಿಸಿ ಮಂಜೂರಾತಿ ಪಡೆದು ಅಭಿವೃದ್ಧಿ ಪಡಿಸಿ ತದನಂತರ ಎಲ್ಲ ನಿವೇಶನಗಳ ಗ್ರಾಹಕರಿಂದ ಅರ್ಜಿ ಪಡೆದು ನಿಗಮದ ನಿಯಮಾನುಸಾರ ನಿವೇಶನದಾರರಿಂದ ಅಭಿವೃದ್ಧಿ ಶುಲ್ಕ ಭರಣಾ ಮಾಡಿಸಿಕೊಂಡು ಮೂಲಭೂತ ಸೌಕರ್ಯ ನಿರ್ಮಿಸಿ ಹಾಲಿ ಇರುವ ವಿದ್ಯುತ್ ಜಾಲದಿಂದ ಶಾಶ್ವತ ವಿದ್ಯುತ್ ಸಂಪರ್ಕ ಒದಗಿಸಲು ಸೂಚಿಸಿ, ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ನಾರಾಯಣ ಕಳ್ಳಿಮನಿ
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟ.

ಅಧ್ಯಕ್ಷರು,
(ಸಿದ್ದಪ್ಪ ಬಿಂಜಗೇರಿ,)
ಅಧೀಕ್ಷಕ ಅಭಿಯಂತರರು(ವಿ) ವಿಜಯಪೂರ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟ

ಪ್ರತಿಯನ್ನು:

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಗುಳೇದಗುಡ್ಡ ರವರ ಮಾಹಿತಿಗಾಗಿ.
5) ಶ್ರೀ. ಗಂಗಾಧರ ಮಹಾಂತಪ್ಪ ಅಂಗಡಿ, ಹನುಮಸಾಗರ ರಸ್ತೆ ಉಸ್ಮಾನ ಗಣಿ ಪ್ಲಾಟ್ ಇಲಕಲ್ಲ ಜಿ॥ಬಾಗಲಕೋಟೆ. ಮೋ.ಸಂ:9742844720.

ಕಛೇರಿ ಪ್ರತಿ/ಪ್ರಧಾನ ಕಡತ.